# <u>ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಅಂಕೋಲಾ.</u>

ಸಿ.ಸಿ. ನಂ.81-2024

ಡಿ.ಡಬ್ಲ್ಯೂಃ 1

ಸಾಕ್ಷಿದಾರರ ಹೆಸರು : ಸಂದೀಪ ಮೋಹನ ಗಾಂವಕಾರ

ತಂದೆಯ ಹೆಸರು : ಮೋಹನ ಬಿರಪ್ಪಾ ಗಾಂವಕಾರ

ವಯಸ್ಸು : 38 ವರ್ಷ

ಉದ್ಯೋಗ : ಚಾಲಕ

ವಾಸ : ಅಂಕೋಲಾ

ದಿನಾಂಕಃ 06-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**<u>ಮುಖ್ಯ ವಿಚಾರಣೆಃ ಆರೋಪಿ</u> ಶ್ರೀ ವಿ.ವಿ.ಎಸ್ ವಕೀಲರಿಂದಃ**

1. ನಾನು 10 ವರ್ಷದ ಮೊದಲು ಸೂರ್ಯಾ ಸಹಕಾರಿ ಸಂಘದಲ್ಲಿ 40 ಸಾವಿರ ಸಾಲ ಮಾಡಿದ್ದೆ . ನಾನು ಆ ಸಾಲ ಮರು ಪಾವತಿ ಮಾಡಿರುತ್ತೇನೆ . ಆ ಸಾಲ ತೆಗೆದುಕೊಳ್ಳುವ ಸಮಯದಲ್ಲಿ ನಾನು 4 ಚೆಕ್ ಕೊಟ್ಟಿದ್ದೆ ಸಾಲ ಮರು ಪಾವತಿ ಯಾದ ನಂತರದಲ್ಲಿ ಆ ಚೆಕ್ ಗಳನ್ನು ವಾಪಸ್ಸು ಕೊಡುತ್ತೇನೆ ಎಂದು ಹೇಳಿದ್ದರು ಸಾಲ ಮರು ಪಾವಸಿದರೂ ಆ ಚೆಕ್ ಗಳನ್ನು ಅವರು ವಾಪಸ್ಸು ಕೊಟ್ಟಿಲ್ಲ . ಅದರ ನಂತರ ನಾನು ಅವರ ಬಳಿ ಕೇಳಲು ಹೋಗಿಲ್ಲ ಸುಮ್ಮನೆ ಇದ್ದೆ . ನಂತರ 2-3 ವರ್ಷಗಳ ಹಿಂದೆ ಕೋರ್ಟ ದಿಂದ ಸಮನ್ಸ ಬಂದಿದೆ ಎಂದು ಕೋರ್ಟ ಪೋಲಿಸರು ಬಂದಿದ್ದರು . ಅವರು ನಿಮ್ಮ ಮೇಲೆ ಚೆಕ್ ಬೌನ್ಸ ಅಗಿದೆ ಎಂದು ಹೇಳಿದರು ನಾನು ಯಾವ ಬ್ಯಾಂಕ ನದ್ದು ಎಂದು ಕೇಳಿದಾಗ ಅವರು ಸೂರ್ಯಾ ಸಹಕಾರಿ ಬ್ಯಾಂಕ ದು ಎಂದು ಹೇಳಿರುತ್ತಾರೆ . ನಾನು ಹಣ ತುಂಬಿರುತ್ತೇನೆ. ಆದರೂ ಯಾಕೆ ಕೇಸ್ ಹಾಕಿದರು ಎಂದು ಕೇಳಿದಾಗ ಪ್ರಕರಣ ದಾಖಲು ಆಗಿದೆ ಅದು ಏನೆ ಇದ್ದರೂ ನ್ಯಾಯಾಲಯದಲ್ಲಿ ನೋಡಿ ಕೊಳ್ಳಿ ಎಂದು ಹೇಳಿ ಹೋದರು ಅದೇ ರೀತಿ ಯಾಗಿ ನಾನು ನ್ಯಾಯಾಲಯಕ್ಕೆ ಬರುತ್ತಿದ್ದೇನೆ . ನಾನು ಬೇರೆ ಯಾವುದೆ ಸಾಲ ಮಾಡಿಲ್ಲ . ಈ ಪ್ರಕರಣದಲ್ಲಿ ತೋರಿಸಿದ ಸಾಲ ನಾನು ಮಾಡಿಲ್ಲ . ಸಾಕ್ಷಿಯು ನೋಟರಿಕೃತ ಸಾಲದ ಪಾಸ್ ಪುಸ್ತಕ ಹಾಗೂ ಚೆಕ

ಉಳಿತಾಯದ ಠೇವು ರಶೀದಿಯನ್ನು ಹಾಜರ ಪಡಿಸಿದ್ದು ಸದ್ರಿ ದಾಖಲಾತಿಗಳ ಮೂಲ ದಾಖಲಾತಿ ಹಾಜರ ಪಡಿಸಿದ್ದು ಪರಿಶೀಲನೆ ಮಾಡಿ ನೋಡಿ ಹಿಂತಿರುಗಿಸಿ ನೋಟರಿ ಕೃತ ದಾಖಲಾತಿಗಳನ್ನು ನಿಡಿ-2 ಮತ್ತು 3 ಎಂದು ಗುರುತಿಸಲಾಯಿತು .

( ಈ ಹಂತದಲ್ಲಿ ಪಿರ್ಯಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು .)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.